# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಎಂಎಂಯು ಪದವಿ ಪೂರ್ವ ಕಾಲೇಜು, ಜಿಲ್ಲಾ ಆರೋಗ್ಯದ ಎದುರು, ರಾಮನಗರ ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ.

ಓದಲಾಗಿದೆ:- 1)ಸರ್ಕಾರದ ಆದೇಶ ಸಂಖ್ಯೆ:ಇಡಿ 59 ಪಿಎಂಸಿ 2006, ದಿ:06-10-2007.

2)ಸರ್ಕಾರದ ಆದೇಶ ಸಂಖ್ಯೆ:ಇಡಿ 217 ಪಿಎಂಸಿ 2008, ದಿನಾಂಕ:08-09-2008.

3)ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿ :17-11-2008.

4)ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರಪತ್ರ ಸಂಖ್ಯೆ :ಪಪೂಶಿಇ/ಬಿಆರ್-042/ಸಾ ಆಡ ಖಾಪಪೂಕಾ ಅನು/2009-10 ದಿನಾಂಕ :23-11-2009 ಮತ್ತು ದಿನಾಂಕ :27-09-2010.

* * * *

VR 14/12/11 JD-A) DA-6619

**ಪ್ರಸ್ತಾವನೆ:-**

ರಾಜ್ಯದಲ್ಲಿ ಸಾಮಾನ್ಯ, ಭಾಷಾ/ಮತೀಯ ಅಲ್ಪಸಂಖ್ಯಾತ ವರ್ಗದ ಆಡಳಿತ ಮಂಡಳಿಗಳ ವತಿಯಿಂದ ದಿನಾಂಕ :01-06-1987 ರಿಂದ 94-95ನೇ ಸಾಲಿನವರೆಗೆ ಪ್ರಾರಂಭಿಸಿ, ಸತತವಾಗಿ ನಡೆಸಲಾಗುತ್ತಿರುವ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಮೇಲೆ (1) (2) ಮತ್ತು (3) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಅವಕಾಶ ಕಲ್ಪಿಸಿದ್ದು, ಅದರಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸುವ ಶಿಕ್ಷಣ ಸಂಸ್ಥೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಬಹುದಾಗಿದೆ. ಸರ್ಕಾರದ ಆದೇಶ ಸಂಖ್ಯೆ :ಇಡಿ 219 ಎಂಯುಎನ್ 1987 ದಿನಾಂಕ :18-09-1987 ರಲ್ಲಿ ಮದರಾಸ-ಇ-ಮದೀನಾತುಲ್ ಉಲೂಂ, ಟ್ರಸ್ಟ್, ಕೊಂಕಣಿ ದೊಡ್ಡಿ, ರಾಮದೇವರಬೆಟ್ಟ, ರಾಮನಗರ ಇವರಿಗೆ ಎಂಎಂಯು ಪದವಿ ಪೂರ್ವ ಕಾಲೇಜು, ಜಿಲ್ಲಾ ಆರೋಗ್ಯದ ಎದುರು, ರಾಮನಗರ ಈ ಪದವಿ ಪೂರ್ವ ಕಾಲೇಜು ಮಂಜೂರಾಗಿರುತ್ತದೆ. ಅದರಂತೆ ಸದರಿ ಸ್ಥಳದಲ್ಲಿ ಪದವಿ ಪೂರ್ವ ಕಾಲೇಜನ್ನು 1988-89ನೇ ಸಾಲಿನಿಂದ ಪ್ರಾರಂಭಿಸಿ, ಯಾವುದೇ ವಿಚ್ಛಿನ್ನತೆ ಇಲ್ಲದೇ ನಡೆಸುತ್ತಾ ಬಂದಿದೆ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಿನಾಂಕ:06.10.2007 ಮತ್ತು 08-09-2008 ರ ಆದೇಶಗಳಲ್ಲಿನ ಷರತ್ತುಗಳ ಪ್ರಕಾರ ಜಿಲ್ಲಾ ಪರಿಶೀಲನಾ ಸಮಿತಿಯಿಂದ ಈ ಪದವಿ ಪೂರ್ವ ಕಾಲೇಜನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂಬಂಧ, ತಪಾಸಣೆಯನ್ನು ಮಾಡಿಸಿ, ವರದಿಯನ್ನು ಪಡೆದುಕೊಂಡು, ಸದರಿ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ, ಎಂಎಂಯು ಪದವಿ ಪೂರ್ವ ಕಾಲೇಜು, ಜಿಲ್ಲಾ ಆರೋಗ್ಯದ ಎದುರು, ರಾಮನಗರ ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮೇಲೆ (4) ರಲ್ಲಿ ಓದಲಾದ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಜಿಲ್ಲಾ ಪರಿಶೀಲನಾ ಸಮಿತಿಯ ವರದಿಯನ್ನೊಳಗೊಂಡಂತೆ ಹಾಗೂ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಪ್ರಸ್ತಾವನೆಯನ್ನು ಸರ್ಕಾರದ ಆದೇಶ ದಿನಾಂಕ: 06-10-2007 ಮತ್ತು 08-09-2008 ರಲ್ಲಿನ ಷರತ್ತು ಮತ್ತು ನಿಬಂಧನೆಗಳು ಹಾಗೂ

ಮಾರ್ಗಸೂಚಿಗಳನ್ವಯ ಮತ್ತು ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಬಗ್ಗೆ ಮೇಲೆ (3) ರಲ್ಲಿ ಓದಲಾಗಿರುವ ಸುತ್ತೋಲೆಯನ್ವಯ ಸರ್ಕಾರವು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 250 ಟಿಪಿಯು 2009,**
**ಬೆಂಗಳೂರು, ದಿನಾಂಕ: 2ನೇ ಡಿಸೆಂಬರ್ 2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಸಾಮಾನ್ಯ ವರ್ಗದ ಆಡಳಿತ ಮಂಡಳಿಯಾದ ಮದರಾಸ-ಇ-ಮದೀನಾತುಲ್ ಉಲೂಂ, ಟ್ರಸ್ಟ್, ಕೊಂಕಣಿ ದೊಡ್ಡಿ ರಾಮದೇವರಬೆಟ್ಟ, ರಾಮನಗರ ಇದರ ವತಿಯಿಂದ ನಡೆಸುತ್ತಿರುವ ಎಂಎಂಯು ಪದವಿ ಪೂರ್ವ ಕಾಲೇಜು, ಜಿಲ್ಲಾ ಆರೋಗ್ಯದ ಎದುರು, ರಾಮನಗರ ಈ ಪದವಿ ಪೂರ್ವ ಕಾಲೇಜನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ, ಈ ಕೆಳಕಾಣಿಸಿದ 12(ಹನ್ನೆರಡು) ಉಪನ್ಯಾಸಕರು ಮತ್ತು 01(ಒಂದು) ದ್ವಿತೀಯ ದರ್ಜೆ ಸಹಾಯಕರ ಹುದ್ದೆಗಳೊಂದಿಗೆ ಭವಿಷ್ಯಾನ್ವಯವಾಗಿ ಸಹಾಯಾನುದಾನಕ್ಕೆ ಒಳಪಡಿಸಿ ಆದೇಶಿಸಿದೆ. ಸಹಾಯಾನುದಾನಕ್ಕೆ ಒಳಪಡಿಸಲಾದ ಸಿಬ್ಬಂದಿಯ ವಿವರಗಳು ಕೆಳಕಂಡಂತಿದೆ :-

| ಭೋಧಕ ಸಿಬ್ಬಂದಿ | | | |
|---|---|---|---|
| ಕ್ರ.ಸಂ. | ಹೆಸರು ಶ್ರೀ/ಶ್ರೀಮತಿ | ಪದನಾಮ | ಪ್ರವರ್ಗ |
| 1. | ಫರೀದಾ ಬೇಗಮ್ | ಉರ್ದು ಭಾಷಾ ಉಪನ್ಯಾಸಕರು | ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯಡಿ ನಡೆಯುತ್ತಿರುವ ಪದವಿ ಪೂರ್ವ ಕಾಲೇಜಾದ್ದರಿಂದ ಮೀಸಲಾತಿ ನಿಯಮಗಳು ಅನ್ವಯಿಸುವುದಿಲ್ಲ. |
| 2. | ಮುಬೀನ ಪರ್ವಿನ್ | ಅರ್ಥಶಾಸ್ತ್ರ ಉಪನ್ಯಾಸಕರು | |
| 3 | ರಫತ್ ಜಬೀನ್ | ರಾಜ್ಯಶಾಸ್ತ್ರ ಉಪನ್ಯಾಸಕರು | |
| 4 | ಸುಧಾ ಎಂ.ಎಸ್. | ಕನ್ನಡ ಭಾಷಾ ಉಪನ್ಯಾಸಕರು | |
| 5. | ಅಜ್ರಾ ಜಬೀನ್ | ವಾಣಿಜ್ಯಶಾಸ್ತ್ರ ಉಪನ್ಯಾಸಕರು | |
| 6. | ಕವಿತಾ ಶ್ರೀ ಸಿ.ಟಿ. | ಆಂಗ್ಲ ಭಾಷಾ ಉಪನ್ಯಾಸಕರು | |
| 7. | ಬಿ.ಬಿ.ಆಯಿಷಾ ಸಿದ್ದಿಕ | ಇತಿಹಾಸ ಉಪನ್ಯಾಸಕರು | |
| 8. | ಸಲ್ಮಾ ಎಸ್.ಹೆಚ್. | ಸಮಾಜಶಾಸ್ತ್ರ ಉಪನ್ಯಾಸಕರು | |
| 9. | ಅಥಾವುಲ್ಲಾ ಖಾನ್ ಎಂ. | ಜೀವಶಾಸ್ತ್ರ ಉಪನ್ಯಾಸಕರು | |
| 10. | ಮಹೇಶ್ ಪ್ರಸಾದ್ | ಭೌತಶಾಸ್ತ್ರ ಉಪನ್ಯಾಸಕರು | |
| 11. | ಖೈಸರ್ ಬಾನು | ರಸಾಯನಶಾಸ್ತ್ರ ಉಪನ್ಯಾಸಕರು | |
| 12. | ಮತೀನ್ ಷರೀಫ್ | ಗಣಿತ ಉಪನ್ಯಾಸಕರು | |
| ಬೋಧಕೇತರ ಸಿಬ್ಬಂದಿ | | | |
| 13. | ಇರ್ಫಾನಾ ಖಾನಂ | ದ್ವಿತೀಯ ದರ್ಜೆ ಸಹಾಯಕರು | |

**ಷರತ್ತುಗಳು**

1. ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು, 2006 ರ ನಿಯಮ 21(2) ಮತ್ತು 21(3) ರನ್ವಯ ಸದರಿ ಸಿಬ್ಬಂದಿಗಳು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲವೆಂಬ ಷರತ್ತಿಗೆ ಬದ್ಧನಾಗಿರುತ್ತೇನೆ ಎಂದು ಈ ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರವನ್ನು ಬರೆಸಿಕೊಂಡ ನಂತರವೇ ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮುಂದಿನ ಕ್ರಮವಹಿಸತಕ್ಕದ್ದು.
2. ಸರ್ಕಾರದ ಆದೇಶ ಸಂಖ್ಯೆ : ಇಡಿ 59 ಪಿ.ಎಂ.ಸಿ. 2006 ದಿನಾಂಕ:6-10-2007 ಮತ್ತು ಇಡಿ 217 ಪಿಎಂಸಿ 2008, ದಿನಾಂಕ :08-09-2008 ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 128 ಟಿಪಿಯು 2008, ದಿನಾಂಕ :17-11-2008ರಲ್ಲಿನ ಷರತ್ತು

ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ತಪ್ಪಿದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

3. ಸದರಿ ಕಾಲೇಜಿನಲ್ಲಿ ವಯೋ ನಿವೃತ್ತಿ, ಸಾವು, ರಾಜೀನಾಮೆ ಹಾಗೂ ಇನ್ನಿತರೇ ಕಾರಣಗಳಿಂದಾಗಿ ಖಾಲಿಯಾಗುವ ಹುದ್ದೆಗಳಿಗೆ ಭವಿಷ್ಯದಲ್ಲಿ ಭರ್ತಿ ಮಾಡುವಾಗ ಪರಿಶಿಷ್ಟ ಪಂಗಡದ/ಪರಿಶಿಷ್ಟ ಜಾತಿ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಂಡು ಶೇಕಡ 18 ರಷ್ಟು ಮೀಸಲಾತಿಯನ್ನು ಕಾಪಾಡಿಕೊಳ್ಳತಕ್ಕದ್ದು.
4. ಮತೀಯ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಶಿಕ್ಷಣ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಈ ಪದವಿ ಪೂರ್ವ ಕಾಲೇಜನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ:01–06–1987 ರಿಂದ 90–91ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಅಧಿಕೃತವಾಗಿ ಪ್ರಾರಂಭವಾಗಿರುವುದನ್ನು ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ಆ ರೀತಿ ಆಗಿರದಿದ್ದಲ್ಲಿ ಸಹಾಯಾನುದಾನವನ್ನು ಬಿಡುಗಡೆ ಮಾಡತಕ್ಕದ್ದಲ್ಲ
5. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿದ ನಂತರ ಯಾವುದೇ ವಿಚ್ಛಿನ್ನತೆ ಇಲ್ಲದೇ ಇದುವರೆವಿಗೂ ಸತತವಾಗಿ ನಡೆದಿರಬೇಕು.
6. ಆಯಾ ಆಡಳಿತ ಮಂಡಳಿಯಲ್ಲಿನ ಎಲ್ಲಾ ಸದಸ್ಯರು ಆಯಾ ಸಾಮಾನ್ಯ/ಹಿಂದುಳಿದ/ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು.
7. ಈ ಪದವಿ ಪೂರ್ವ ಕಾಲೇಜು ಪ್ರಾರಂಭವಾದ ದಿನಾಂಕದಿಂದ ಇದುವರೆವಿಗೂ ಮಾನ್ಯತೆಯನ್ನು ಪಡೆದಿರತಕ್ಕದ್ದು. ಹಾಗಿಲ್ಲದಿದ್ದಲ್ಲಿ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದಿದ್ದರೂ ಸಹ ಪದವಿ ಪೂರ್ವ ಕಾಲೇಜು ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆದಿರತಕ್ಕದ್ದು.
8. ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09–10–2006 ರಲ್ಲಿ ನಿಗಧಿಪಡಿಸಿರುವ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗ ಶಾಲೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಆಟದ ಮೈದಾನ ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಹಾಗೂ ಕಾಲೇಜಿನ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಮತ್ತು ನಿರ್ಮಲವಾದ ವಾತಾವರಣ ಹೊಂದಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ಉತ್ತಮಗೊಳಿಸುವ ನಿಟ್ಟಿನಲ್ಲಿರುವಂತೆ, ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ಕಾಲಾವಕಾಶದಲ್ಲಿ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.
9. ಪದವಿ ಪೂರ್ವ ಕಾಲೇಜಿಗೆ ದಿನಾಂಕ :01–06–1987 ರಿಂದ 94–95ನೇ ಸಾಲಿನವರೆಗೆ ಮಂಜೂರಾಗಿರುವಂತಹ ವಿಭಾಗಗಳು/ಸಂಯೋಜನೆಗಳನ್ನು ಮಾತ್ರ ಸಹಾಯಾನುದಾನಕ್ಕೆ ಒಳಪಡಿಸತಕ್ಕದ್ದು.
10. ಪ್ರತಿಯೊಂದು ಸಂಯೋಜನೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ :17–11–2008 ರಲ್ಲಿ ನಿಗಧಿಪಡಿಸಿರುವಂತೆ ಕನಿಷ್ಠ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿ ಇರತಕ್ಕದ್ದು ಹಾಗೂ ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.
11. ಸರ್ಕಾರದ ಆದೇಶ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ:09–10–2006 ರಲ್ಲಿ ನಿಗಧಿಪಡಿಸಿರುವ ಮಾದರಿ ಸಿಬ್ಬಂದಿಯಂತೆ ನೇಮಕಾತಿಯನ್ನು ಮಾಡಿಕೊಳ್ಳತಕ್ಕದ್ದು.
12. ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ ಅಂತಹ ಪದವಿ ಪೂರ್ವ ಕಾಲೇಜಿನ ನೌಕರರು ಸಹಾಯಾನುದಾನಕ್ಕೆ ಅರ್ಹತೆ ಪಡೆಯುವುದಿಲ್ಲ.
13. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಮತ್ತು ನಿಯಮಗಳು 1961ರನ್ವಯ ಪ್ರತಿ ವರ್ಷ ಆಡಿಟ್ ನಡೆಸಿ, ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ

ಸಲ್ಲಿಸಬೇಕು. ಹಾಗೂ ಶಿಕ್ಷಣ ಇಲಾಖೆಯ ಮಾಹಿತಿಗಾಗಿ ಪಿ.ಟಿ.ಆರ್. ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು (ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಲ್ಪಟ್ಟಿರಬೇಕು) ಸಲ್ಲಿಸತಕ್ಕದ್ದು.

14. ಪ್ರತಿ ವರ್ಷ ಶೈಕ್ಷಣಿಕ ಮಾನ್ಯತೆಯನ್ನು ಸಂಬಂಧಿಸಿದ ನಿಯಮ/ಆದೇಶಗಳನ್ವಯ ನಿಗಧಿಪಡಿಸಿದಂತೆ ಪಡೆಯತಕ್ಕದ್ದು. ಪದವಿ ಪೂರ್ವ ಕಾಲೇಜಿನಲ್ಲಿ ನಿಗಧಿತ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.

15. ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ನಂತರ, ಎಲ್ಲಾ ಷರತ್ತುಗಳನ್ನು ಪೂರೈಸಲಾಗಿದೆಯೇ ಎಂಬುದರ ಬಗ್ಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ತಪಾಸಣೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

16. ಮೇಲ್ಕಂಡ ಬೋಧಕ/ಬೋಧಕೇತರ ಸಿಬ್ಬಂದಿಯ ವೇತನವನ್ನು ಭವಿಷ್ಯಾನ್ವಯವಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ನಿಯಮಗಳನುಸಾರ ಸಂಬಂಧಿಸಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ನಿಗಧಿಪಡಿಸಿ ನೀಡತಕ್ಕದ್ದು.

17. ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 90 ಪಿಎಂಸಿ 99, ದಿನಾಂಕ :15-10-99 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ : ಇಡಿ 674 ಎಸ್‌ಇಡಬ್ಲ್ಯೂ 2005, ದಿನಾಂಕ :10-04-2006 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09-10-2006 ರ ನಿಯಮ 21(2)(3) ರನ್ವಯ ಹಿಂದಿನ ಯಾವುದೇ ಬಾಕಿಗೆ ಈ ಸಿಬ್ಬಂದಿಗಳು ಅರ್ಹರಿರುವುದಿಲ್ಲ. ಇವರ ಹಿಂದಿನ ಅನುದಾನರಹಿತ ಸೇವೆಯನ್ನು ವೇತನ ನಿಗಧಿ, ವೇತನ ಬಡ್ತಿ, ಪಿಂಚಣಿ, ರಜೆ, ಸೇವಾ ಜೇಷ್ಠತೆ ಮತ್ತು ಯಾವುದೇ ಇತರೆ ಸೇವಾ ಸೌಲಭ್ಯಗಳಿಗೆ ಪರಿಗಣಿಸತಕ್ಕದ್ದಲ್ಲ.

18. ಮೇಲ್ಕಂಡ ಸಿಬ್ಬಂದಿಗಳ ವೇತನವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾನ್ವಯವಾಗಿ ಮಾತ್ರ ಬಿಡುಗಡೆ ಮಾಡತಕ್ಕದ್ದು.

19. ಈ ಆದೇಶದಲ್ಲಿ ನಮೂದಿಸಿರುವ ಒಟ್ಟು 12(ಹನ್ನೆರಡು) ಉಪನ್ಯಾಸಕರು ಹಾಗೂ 01(ಒಂದು) ದ್ವಿತೀಯ ದರ್ಜೆ ಸಹಾಯಕ ಸಿಬ್ಬಂದಿಗಳಿಗೆ ತಗಲುವ ವೆಚ್ಚವನ್ನು 2011-2012ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಒದಗಿಸಿರುವ ಒಟ್ಟಾರೆ ಆಯವ್ಯಯದಲ್ಲಿ, ನಿಗಧಿತ ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ಆಯವ್ಯಯ ಕೋರಬಾರದು. ನಿಗದಿತ ಲೆಕ್ಕಶೀರ್ಷಿಕೆ(2202-02-110-3-01-101(ಯೋಜನೆ)ಅಡಿಯಲ್ಲಿ ಖರ್ಚು ಹಾಕತಕ್ಕದ್ದು. ಮತ್ತು ಆ ಸಂಬಂಧದ ಲೆಕ್ಕಾಚಾರದ ಸಂಪೂರ್ಣ ವಿವರಗಳನ್ನು 2011-2012ನೇ ಸಾಲಿನ ನಿಗಧಿತ ಚೆಕ್‌ಲಿಸ್ಟ್‌ನಲ್ಲಿ ಭರ್ತಿ ಮಾಡಿ ದೃಢೀಕರಿಸಿಕೊಳ್ಳತಕ್ಕದ್ದು.

20. ದಿನಾಂಕ :01-04-2007 ರಿಂದೀಚೆಗೆ ಸದರಿ ಕಾಲೇಜಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ, ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

21. ಸಹಾಯಾನುದಾನಕ್ಕೆ ಒಳಪಡಿಸಿರುವ ಈ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿನ ಸಾಮಾನ್ಯ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಿಗೆ ಇರತಕ್ಕದ್ದು. ಪ್ರಸ್ತುತ ಈ ರೀತಿ ಇಲ್ಲದಿದ್ದಲ್ಲಿ, ಸಹಾಯಾನುದಾನಕ್ಕೆ ಒಳಪಡಿಸಿದ ಈ ಆದೇಶ ಹೊರಡಿಸಿದ ದಿನಾಂಕದಿಂದ 02 ವರ್ಷಗಳ ಅಂತ್ಯದಲ್ಲೂ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿ ಮೇಲಿನಂತೆ ನಿಗಧಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೇ ಇದ್ದಲ್ಲಿ, ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

22. ಈ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಹಾಯಾನುದಾನ ಬಿಡುಗಡೆ ಮಾಡುವ ಮುನ್ನ, ಅವರು ಹೊಂದಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಬಗ್ಗೆ ಹಾಗೂ ಜಾತಿ ದೃಢೀಕರಣ ಪ್ರಮಾಣ ಪತ್ರಗಳ ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ, ಖಚಿತಪಡಿಸಿಕೊಂಡ ನಂತರ ಸಹಾಯಾನುದಾನವನ್ನು ಬಿಡುಗಡೆ ಮಾಡಲು

ಕ್ರಮವಹಿಸತಕ್ಕದ್ದು. ಮುಂದುವರೆದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ಸಿಂಧುತ್ವ ಪ್ರಮಾಣ ಪತ್ರದ ಮೂಲ ದಾಖಲಾತಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

23. ಕರ್ನಾಟಕ ಶಿಕ್ಷಣ ಅಧಿನಿಯಮ 1983 ಹಾಗೂ ಇದರಡಿಯಲ್ಲಿ ರಚಿಸಲಾದ ಎಲ್ಲಾ ನಿಯಮಾಗಳನ್ನು ಪಾಲಿಸತಕ್ಕದ್ದು.
24. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ, ಬೇರೆ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಲ್ಲಿ ಅಂತಹ ವಿಶ್ವವಿದ್ಯಾಲಯಗಳಿಂದ ಪಡೆದ ಅಂಕಪಟ್ಟಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.
25. ದಿನಾಂಕ:11-09-2006 ರ ಸರ್ಕಾರದ ಪತ್ರ ಸಂಖ್ಯೆ :ಇಡಿ 94 ಎಸ್‌ಇಪಿ 2006 ರನ್ವಯ ರಚಿಸಲಾಗಿರುವ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ ನಿಯಮಗಳು 2005 ನ್ನು ಹಿಂದಿನ ಸೇವಾವಧಿಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.
26. ಮೇಲ್ಕಂಡ ನೌಕರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 1999, ದಿನಾಂಕ :09-10-2006 ರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.
27. ಆಡಳಿತ ಮಂಡಳಿಯು ಅನುದಾನ ಸಂಹಿತೆಯ ನಿಯಮಗಳನ್ನು ಹಾಗೂ ಸರ್ಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು, ಸೂಚನೆಗಳನ್ನು, ಸುತ್ತೋಲೆಗಳನ್ನು ಮಾರ್ಗಸೂಚಿಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.
28. ಈ ಪದವಿ ಪೂರ್ವ ಕಾಲೇಜಿನಲ್ಲಿ ಮುಂದೆ ಖಾಲಿಯಾಗುವ ಅನುದಾನಿತ ಹುದ್ದೆಗಳನ್ನು ತುಂಬಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.
29. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಉಪನ್ಯಾಸಕರಿಗೆ ನಿಗಧಿತ ಕಾರ್ಯಭಾರವಿದೆಯೇ ಎಂಬ ಬಗ್ಗೆ ನಿರ್ದೇಶಕರು/ಜಿಲ್ಲಾ ಉಪ ನಿರ್ದೇಶಕರು ಪರಿಶೀಲಿಸಿದ ನಂತರ ವೇತನ ಬಿಡುಗಡೆ ಮಾಡತಕ್ಕದ್ದು.
30. ದಿನಾಂಕ :09-10-2006 ರ ಅಧಿಸೂಚನೆಯ ನಿಯಮ 21(4) ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ:17-11-2008 ರನ್ವಯ ಪರಿಶೀಲಿಸಿ, ಸಹಾಯಾನುದಾನದ ಬಗ್ಗೆ ಕ್ರಮ ವಹಿಸತಕ್ಕದ್ದು.
31. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲಾತಿಗಳು ಅಥವಾ ಮಾಹಿತಿಗಳು ಮುಂದೆ ತಪ್ಪೆಂದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.
32. ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ, ಸೇವಾ ಸೌಲಭ್ಯಗಳು ಇತ್ಯಾದಿಗಳ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಸಹಾಯಾನುದಾನ ಇಲ್ಲದ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ನ್ನು ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಇದಲ್ಲದೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಕಲಂ 92 ರನ್ವಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು, ಅದರನ್ವಯ ವಿಚಾರಣೆ ನಡೆಸದೆ ಸೇವೆಯಿಂದ ವಜಾ ಮಾಡಲು ಅಥವಾ ತೆಗೆದು ಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಆಡಳಿತ ಮಂಡಳಿ ತನ್ನ ನೌಕರರ ವಿರುದ್ಧ ಕ್ರಮತೆಗೆದುಕೊಂಡಿದ್ದಲ್ಲಿ ಅಥವಾ ತನ್ನ ನೌಕರರಿಗೆ ಮೇಲೆ ಹೇಳಲಾದ ನಿಯಮಗಳನ್ವಯ ದೊರಕಿಸಬೇಕಾದ ಸೇವಾ ಸೌಲಭ್ಯಗಳನ್ನು ದೊರಕಿಸದೆ ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ್ದಲ್ಲಿ, ಆ ಉಲ್ಲಂಘನೆಯ ಕಾರಣಕ್ಕಾಗಿ ಸಂಸ್ಥೆಗೆ ಸಹಾಯಾನುದಾನ ನೀಡತಕ್ಕದ್ದಲ್ಲ.

33. ಈ ಆದೇಶವನ್ನು ಆರ್ಥಿಕ ಇಲಾಖೆಯು ದಿನಾಂಕ :25/5/2007ರ ಟಿಪ್ಪಣಿ ಸಂಖ್ಯೆ ಆ.ಇ.493/ವೆಚ್ಚ-8/2007ರಲ್ಲಿ, ದಿನಾಂಕ :25/8/2008ರ ಟಿಪ್ಪಣಿ ಸಂಖ್ಯೆ ಆ.ಇ.839/ವೆಚ್ಚ-8/2008, ದಿನಾಂಕ :2/9/2008ರ ಟಿಪ್ಪಣಿ ಸಂಖ್ಯೆ ಆ.ಇ. 871/ವೆಚ್ಚ-8/2008 ಮತ್ತು ಆಇ 594 ವೆಚ್ಚ8 2011 ದಿನಾಂಕ :24-09-2011 ರನ್ವಯ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯ ದಿನಾಂಕ :31/5/2007ರ ಟಿಪ್ಪಣಿ ಸಂಖ್ಯೆ ಯೋಇ/65/ಜಶ/2007 ಮತ್ತು ದಿನಾಂಕ :26/8/2008ರ ಟಿಪ್ಪಣಿ ಸಂಖ್ಯೆ ಪಿಡಿ 87 ಎಂ ಅಂಡ್ ಇ/2008 ಹಾಗೂ ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ ಶಿ.ಇ./359/ಐಎಫ್ಎಸ್/2010 ದಿನಾಂಕ :19/04/2010 ಮತ್ತು ಶಿಇ/1021/ಐಎಫ್ಎಸ್/2011 ದಿನಾಂಕ :29-10-2011 ರನ್ವಯ ನೀಡಿರುವ ಸಹಮತಿಯಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
(ಎಸ್.ಹೆಚ್.ಕುರಿಯವರ್) 2/12/11
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪದವಿ ಪೂರ್ವ)

ಇವರಿಗೆ:-

1. ಮಹಾಲೇಖಪಾಲರು, (ಎ ಅಂಡ್ ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-560 012. (~~ಪ್ರಸ್ತಾವನೆಯಲ್ಲಿ ಸರ್ಕಾರಕ್ಕೆ ಕಳುಹಿಸಲಾದ ಎಲ್ಲಾ ಮೂಲ ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ~~)
3. ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ.
4. ಜಿಲ್ಲಾ ನೋಂದಣಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ.
5. ಜಿಲ್ಲಾ ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ರಾಮನಗರ ಜಿಲ್ಲೆ, ರಾಮನಗರ.
6. ಉಪ ವಿಭಾಗಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ.
7. ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ(ಆಡಳಿತ), ಶಿಕ್ಷಣ ಇಲಾಖೆ.
8. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.
9. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಆಪ್ತ ಕಾರ್ಯದರ್ಶಿಗಳು, ಕಾರ್ಯದರ್ಶಿಯವರ ಆಪ್ತ ಶಾಖೆ, ಶಿಕ್ಷಣ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು, (ವೆಚ್ಚ-8) ಆರ್ಥಿಕ ಇಲಾಖೆ/ಯೋಜನಾ ಇಲಾಖೆ/(ಪಿಪಿ-1)
12. ಅಧ್ಯಕ್ಷರು/ಕಾರ್ಯದರ್ಶಿಗಳು, ಮದರಾಸ-ಇ-ಮದೀನಾತುಲ್ ಉಲೂಂ, ಟ್ರಸ್ಟ್, ಕೊಂಕಣಿ ದೊಡ್ಡಿ, ರಾಮದೇವರಬೆಟ್ಟ, ರಾಮನಗರ.
13. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ.

ಓದಲಾಗಿದೆ:- 1)ಸರ್ಕಾರದ ಆದೇಶ ಸಂಖ್ಯೆ:ಇಡಿ 63 ಟಿಪಿಯು 2003, ದಿ:07-05-2007.

2)ಸರ್ಕಾರದ ಆದೇಶ ಸಂಖ್ಯೆ:ಇಡಿ 59 ಪಿಎಂಸಿ 2006, ದಿ:06-10-2007.

3)ಸರ್ಕಾರದ ಆದೇಶ ಸಂಖ್ಯೆ:ಇಡಿ 217 ಪಿಎಂಸಿ 2008, ದಿನಾಂಕ:08-09-2008.

4)ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿ :17-11-2008.

5)ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ :ಪಪೂಶಿಇ/ಪ ಜಾತಿ-ಪ ಪಂ ಖಾಪಪೂಕಾ ಅನು/ಎಂಎಂ 041/2009-10 ದಿನಾಂಕ :03-03-2010.

* * * *

UR 14/12/11 JD-A) DA-6618

ಪ್ರಸ್ತಾವನೆ:-

ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ದಿನಾಂಕ :01-06-1987 ರಿಂದ 94-95ನೇ ಸಾಲಿನವರೆಗೆ ಪ್ರಾರಂಭಿಸಿ, ಸತತವಾಗಿ ನಡೆಸಲಾಗುತ್ತಿರುವ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಮೇಲೆ (1) (2) ಮತ್ತು (3) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಅವಕಾಶ ಕಲ್ಪಿಸಿದ್ದು, ಅದರಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸುವ ಶಿಕ್ಷಣ ಸಂಸ್ಥೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಬಹುದಾಗಿದೆ. ಸರ್ಕಾರದ ಆದೇಶ ಸಂಖ್ಯೆ :ಇಡಿ 40 ಎಸ್‌ಹೆಚ್‌ಹೆಚ್ 1990 ದಿನಾಂಕ :04-01-1991 ರ ಆದೇಶದಲ್ಲಿ ಹೆಬ್ಬಾಳ್ ಶ್ರೀ ಮಾರುತಿ ವಿದ್ಯಾಸಂಸ್ಥೆ, ಬೆಂಗಳೂರು-24 ಇವರಿಗೆ ಮಂಜೂರಾಗಿದ್ದ ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ ಇದನ್ನು 1990-91ನೇ ಸಾಲಿನಿಂದ ಪ್ರಾರಂಭಿಸಿ, ಯಾವುದೇ ವಿಚ್ಛಿನ್ನತೆ ಇಲ್ಲದೇ ನಡೆಸುತ್ತಾ ಬಂದಿದೆ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಿನಾಂಕ :07-05-2007, 06.10.2007 ಮತ್ತು 08-09-2008 ರ ಆದೇಶಗಳಲ್ಲಿನ ಷರತ್ತುಗಳ ಪ್ರಕಾರ ಜಿಲ್ಲಾ ಪರಿಶೀಲನಾ ಸಮಿತಿಯಿಂದ ಈ ಪದವಿ ಪೂರ್ವ ಕಾಲೇಜನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂಬಂಧ, ತಪಾಸಣೆಯನ್ನು ಮಾಡಿಸಿ, ವರದಿಯನ್ನು ಪಡೆದುಕೊಂಡು, ಸದರಿ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ

ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಜಿಲ್ಲಾ ಪರಿಶೀಲನಾ ಸಮಿತಿಯ ವರದಿಯನ್ನೊಳಗೊಂಡಂತೆ ಹಾಗೂ ನಿರ್ದೇಶಕರ ಪ್ರಸ್ತಾವನೆಯನ್ನು ಸರ್ಕಾರದ ಆದೇಶ ದಿನಾಂಕ :07-05-2007, 06-10-2007 ಮತ್ತು 08-09-2008 ರಲ್ಲಿನ ಷರತ್ತು ಮತ್ತು ನಿಬಂಧನೆಗಳು ಹಾಗೂ ಮಾರ್ಗಸೂಚಿಗಳನ್ವಯ ಮತ್ತು ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಬಗ್ಗೆ ಮೇಲೆ (4) ರಲ್ಲಿ ಹೊರಡಿಸಲಾಗಿರುವ ಸುತ್ತೋಲೆಯನ್ವಯ ಸರ್ಕಾರವು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 49 ಟಿಪಿಯು 2010,**
**ಬೆಂಗಳೂರು, ದಿನಾಂಕ: 08ನೇ ಡಿಸೆಂಬರ್ 2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಾದ ಹೆಬ್ಬಾಳ್ ಶ್ರೀ ಮಾರುತಿ ವಿದ್ಯಾಸಂಸ್ಥೆ, ಬೆಂಗಳೂರು-24 ಇದರ ವತಿಯಿಂದ ನಡೆಯುತ್ತಿರುವ ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ ಈ ಪದವಿ ಪೂರ್ವ ಕಾಲೇಜನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ, ಈ ಕೆಳಕಾಣಿಸಿದ 06 (ಆರು) ಉಪನ್ಯಾಸಕರುಗಳ ಹುದ್ದೆಗಳೊಂದಿಗೆ ಭವಿಷ್ಯಾನ್ವಯವಾಗಿ ಸಹಾಯಾನುದಾನಕ್ಕೆ ಒಳಪಡಿಸಿ ಆದೇಶಿಸಿದೆ. ಸಹಾಯಾನುದಾನಕ್ಕೆ ಒಳಪಡಿಸಲಾದ ಸಿಬ್ಬಂದಿಯ ವಿವರಗಳು ಕೆಳಕಂಡಂತಿದೆ :-

| ಬೋಧಕ ಸಿಬ್ಬಂದಿ | | | |
|---|---|---|---|
| ಕ್ರ ಸಂ. | ಹೆಸರು ಶ್ರೀ/ಶ್ರೀಮತಿ | ಪದನಾಮ | ಪ್ರವರ್ಗ |
| 1. | ರಾಮಚಂದ್ರಪ್ಪ ಹೆಚ್. | ಸಮಾಜಶಾಸ್ತ್ರ ಉಪನ್ಯಾಸಕರು | ಸಾಮಾನ್ಯ |
| 2. | ಮುನಿಯಪ್ಪ ಎಂ. | ಕನ್ನಡ ಭಾಷಾ ಉಪನ್ಯಾಸಕರು | ಪರಿಶಿಷ್ಟ ಜಾತಿ |
| 3. | ಮಹಾಂತೇಶ್ವರ ಟಿ. | ಆಂಗ್ಲ ಭಾಷಾ ಉಪನ್ಯಾಸಕರು | ಪ್ರವರ್ಗ-3ಬಿ |
| 4. | ಸುಭಾಕರ್ ರಾವ್ ಸಿಂಧೆ ಬಿ. | ಇತಿಹಾಸ ಉಪನ್ಯಾಸಕರು | ಪ್ರವರ್ಗ-3ಬಿ |
| 5. | ನಾಗರಾಜ | ಅರ್ಥಶಾಸ್ತ್ರ ಉಪನ್ಯಾಸಕರು | ಪರಿಶಿಷ್ಟ ಪಂಗಡ |
| 6. | ಎಂ.ಡಿ.ಸತ್ಯನಾರಾಯಣ್ | ರಾಜ್ಯಶಾಸ್ತ್ರ ಉಪನ್ಯಾಸಕರು | ಪ್ರವರ್ಗ-1 |

## ಷರತ್ತುಗಳು

1. ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು, 2006 ರ ನಿಯಮ 21(2) ಮತ್ತು 21(3) ರನ್ವಯ ಸದರಿ ಸಿಬ್ಬಂದಿಗಳು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲವೆಂಬ ಷರತ್ತಿಗೆ ಬದ್ಧನಾಗಿರುತ್ತೇನೆ ಎಂದು ಪ್ರತಿಯೊಬ್ಬ ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರವನ್ನು

ಬರೆಸಿಕೊಂಡ ನಂತರವೇ ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮುಂದಿನ ಕ್ರಮವಹಿಸತಕ್ಕದ್ದು.

2. ಸರ್ಕಾರದ ಆದೇಶ ಸಂಖ್ಯೆ :ಇಡಿ 63 ಟಿಪಿಯು 2003, ದಿನಾಂಕ :07-05-2007 ಮತ್ತು ಸರ್ಕಾರದ ಆದೇಶ ಸಂಖ್ಯೆ :ಇಡಿ 217 ಪಿಎಂಸಿ 2008, ದಿನಾಂಕ : 08-09-2008 ರಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ತಪ್ಪಿದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಶಿಕ್ಷಣ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಈ ಪದವಿ ಪೂರ್ವ ಕಾಲೇಜನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ:01-06-1987 ರಿಂದ 90-91ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಅಧಿಕೃತವಾಗಿ ಪ್ರಾರಂಭವಾಗಿರುವುದನ್ನು ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ಆ ರೀತಿ ಆಗಿರದಿದ್ದಲ್ಲಿ ಸಹಾಯಾನುದಾನವನ್ನು ಬಿಡುಗಡೆ ಮಾಡತಕ್ಕದ್ದಲ್ಲ.

4. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿದ ನಂತರ ಯಾವುದೇ ವಿಚ್ಛಿನ್ನತೆ ಇಲ್ಲದೇ ಇದುವರೆವಿಗೂ ಸತತವಾಗಿ ನಡೆದಿರಬೇಕು.

5. ಆಡಳಿತ ಮಂಡಳಿಯಲ್ಲಿನ ಎಲ್ಲಾ ಸದಸ್ಯರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

6. ಈ ಪದವಿ ಪೂರ್ವ ಕಾಲೇಜಿನಲ್ಲಿ ಶೇ 50 ಕ್ಕಿಂತ ಕಡಿಮೆ ಇಲ್ಲದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿರಬೇಕು. ಈ ಷರತ್ತನ್ನು ಸಹಾಯಾನುದಾನಕ್ಕೆ ಒಳಪಡಿಸಿದ 03 ವರ್ಷಗಳ ಒಳಗೆ ಪೂರೈಸತಕ್ಕದ್ದು. ಇಲ್ಲದಿದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

7. ಈ ಪದವಿ ಪೂರ್ವ ಕಾಲೇಜು ಪ್ರಾರಂಭವಾದ ದಿನಾಂಕದಿಂದ ಇದುವರೆವಿಗೂ ಮಾನ್ಯತೆಯನ್ನು ಪಡೆದಿರತಕ್ಕದ್ದು. ಹಾಗಿಲ್ಲದಿದ್ದಲ್ಲಿ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದಿದ್ದರೂ ಸಹ ಪದವಿ ಪೂರ್ವ ಕಾಲೇಜು ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆದಿರತಕ್ಕದ್ದು.

8. ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09-10-2006 ರಲ್ಲಿ ನಿಗಧಿಪಡಿಸಿರುವ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗ ಶಾಲೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಆಟದ ಮೈದಾನ ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಹಾಗೂ ಕಾಲೇಜಿನ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಮತ್ತು ನಿರ್ಮಲವಾದ ವಾತಾವರಣ ಹೊಂದಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ಉತ್ತಮಗೊಳಿಸುವ ನಿಟ್ಟಿನಲ್ಲಿರುವಂತೆ, ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ಕಾಲಾವಕಾಶದಲ್ಲಿ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

9. ಪದವಿ ಪೂರ್ವ ಕಾಲೇಜಿಗೆ ದಿನಾಂಕ :01-06-1987 ರಿಂದ 94-95ನೇ ಸಾಲಿನವರೆವಿಗೆ ಮಂಜೂರಾಗಿರುವಂತಹ ವಿಭಾಗಗಳು/ಸಂಯೋಜನೆಗಳನ್ನು ಮಾತ್ರ ಸಹಾಯಾನುದಾನಕ್ಕೆ ಒಳಪಡಿಸತಕ್ಕದ್ದು.

10. ಪ್ರತಿಯೊಂದು ಸಂಯೋಜನೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ :17-11-2008 ರಲ್ಲಿ ನಿಗಧಿಪಡಿಸಿರುವಂತೆ ಕನಿಷ್ಟ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರತಕ್ಕದ್ದು. ಹಾಗೂ ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.

11. ಸರ್ಕಾರದ ಆದೇಶ ಸಂಖ್ಯೆ :ಇಡಿ 136 ಟಿಪಿಯು 2009, ದಿನಾಂಕ :09-10-2006 ರಲ್ಲಿ ನಿಗಧಿಪಡಿಸಿರುವ ಹಾಗೂ ಸರ್ಕಾರದ ಆದೇಶ ಸಂಖ್ಯೆ :ಇಡಿ 63 ಟಿಪಿಯು 2003, ದಿನಾಂಕ :07.05.2007 ರ ಅನುಬಂಧ-2 ರಲ್ಲಿ ಕ್ರಮ ಸಂಖ್ಯೆ :13 ರಲ್ಲಿರುವ ಮಾದರಿ ಸಿಬ್ಬಂದಿಯಂತೆ ನೇಮಕಾತಿಯನ್ನು ಮಾಡಿಕೊಳ್ಳತಕ್ಕದ್ದು.

12. ಸಿಬ್ಬಂದಿ ನೇಮಕಾತಿಯು ಸರ್ಕಾರದ ಮೀಸಲಾತಿ ಆದೇಶಗಳನ್ವಯ ನಿಗಧಿಪಡಿಸಿದ 100 ಬಿಂದುಗಳ ಮೀಸಲಾತಿ ರೋಸ್ಟರ್ ಪ್ರಕಾರ ಇರತಕ್ಕದ್ದು. ಪರಿಶಿಷ್ಟ ಜಾತಿಗೆ ಕನಿಷ್ಟ ಶೇ.15 ರಷ್ಟು ಮತ್ತು ಪರಿಶಿಷ್ಟ ಪಂಗಡಕ್ಕೆ ಕನಿಷ್ಟ ಶೇ. 3 ರಷ್ಟು ಪ್ರಾತಿನಿಧ್ಯತೆ ಇರತಕ್ಕದ್ದು. ದಿನಾಂಕ :01-06-1992 ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮೀಸಲಾತಿ ಉಲ್ಲಂಘನೆಯನ್ನು ದಿನಾಂಕ :21-04-1995 ರ ಸರ್ಕಾರದ ಆದೇಶ ಸಂಖ್ಯೆ :ಇಡಿ 227 ಎಸ್‌ಇಪಿ 94 ರನ್ವಯ ಮನ್ನಾ ಮಾಡಲಾಗಿದೆ. ಇದರಿಂದಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಆದ ನಷ್ಟವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ, ಮುಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಕಡ್ಡಾಯವಾಗಿ ಮೀಸಲಾತಿಯನ್ನು ಸರಿದೂಗಿಸಿಕೊಳ್ಳತಕ್ಕದ್ದು.

13. ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ ಅಂತಹ ಪದವಿ ಪೂರ್ವ ಕಾಲೇಜಿನ ನೌಕರರು ಸಹಾಯಾನುದಾನಕ್ಕೆ ಅರ್ಹತೆ ಪಡೆಯುವುದಿಲ್ಲ.

14. ಸಹಾಯಾನುದಾನಕ್ಕೆ ಒಳಪಡಿಸಿರುವ ಈ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿನ ಸಾಮಾನ್ಯ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಿಗೆ ಇರತಕ್ಕದ್ದು. ಪ್ರಸ್ತುತ ಈ ರೀತಿ ಇಲ್ಲದಿದ್ದಲ್ಲಿ, ಸಹಾಯಾನುದಾನಕ್ಕೆ ಒಳಪಡಿಸಿದ ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ಅಂತ್ಯದಲ್ಲೂ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿ ಮೇಲಿನಂತೆ ನಿಗಧಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೇ ಇದ್ದಲ್ಲಿ, ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

15. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಮತ್ತು ನಿಯಮಗಳು 1961ರನ್ವಯ ಪ್ರತಿ ವರ್ಷ ಆಡಿಟ್ ನಡೆಸಿ, ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಹಾಗೂ ಶಿಕ್ಷಣ ಇಲಾಖೆಯ ಮಾಹಿತಿಗಾಗಿ ಪಿ.ಟಿ.ಆರ್. ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು (ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಲ್ಪಟ್ಟಿರಬೇಕು) ಸಲ್ಲಿಸತಕ್ಕದ್ದು.

16. ಪ್ರತಿ ವರ್ಷ ಶೈಕ್ಷಣಿಕ ಮಾನ್ಯತೆಯನ್ನು ಸಂಬಂಧಿಸಿದ ನಿಯಮ/ಆದೇಶಗಳನ್ವಯ ನಿಗಧಿಪಡಿಸಿದಂತೆ ಪಡೆಯತಕ್ಕದ್ದು. ಪದವಿ ಪೂರ್ವ ಕಾಲೇಜಿನಲ್ಲಿ ನಿಗಧಿತ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.

17. ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ನಂತರ, ಎಲ್ಲಾ ಷರತ್ತುಗಳನ್ನು ಪೂರೈಸಲಾಗಿದೆಯೇ ಎಂಬುದರ ಬಗ್ಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ತಪಾಸಣೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

18. ಮೇಲ್ಕಂಡ ಬೋಧಕ/ಬೋಧಕೇತರ ಸಿಬ್ಬಂದಿಯ ವೇತನವನ್ನು ಭವಿಷ್ಯಾನ್ವಯವಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ನಿಯಮಗಳನುಸಾರ ಸಂಬಂಧಿಸಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ನಿಗಧಿಪಡಿಸಿ ನೀಡತಕ್ಕದ್ದು.

19. ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 90 ಪಿಎಂಸಿ 99, ದಿನಾಂಕ :15-10-99 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ : ಇಡಿ 674 ಎಸ್ಇಡಬ್ಲ್ಯೂ 2005, ದಿನಾಂಕ :10-04-2006 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09-10-2006 ರ ನಿಯಮ 21(2)(3) ರನ್ವಯ ಹಿಂದಿನ ಯಾವುದೇ ಬಾಕಿಗೆ ಈ ಸಿಬ್ಬಂದಿಗಳು ಅರ್ಹರಿರುವುದಿಲ್ಲ. ಇವರ ಹಿಂದಿನ ಅನುದಾನರಹಿತ ಸೇವೆಯನ್ನು ವೇತನ ನಿಗಧಿ, ವೇತನ ಬಡ್ತಿ, ಪಿಂಚಣಿ. ರಜೆ, ಸೇವಾ ಜೇಷ್ಠತೆ ಮತ್ತು ಯಾವುದೇ ಇತರೆ ಸೇವಾ ಸೌಲಭ್ಯಗಳಿಗೆ ಪರಿಗಣಿಸತಕ್ಕದ್ದಲ್ಲ.

20. ಮೇಲ್ಕಂಡ ಸಿಬ್ಬಂದಿಗಳ ವೇತನವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾನ್ವಯವಾಗಿ ಮಾತ್ರ ಬಿಡುಗಡೆ ಮಾಡತಕ್ಕದ್ದು.

21. ಈ ಆದೇಶದಲ್ಲಿ ನಮೂದಿಸಿರುವ ಒಟ್ಟು 06(ಆರು) ಉಪನ್ಯಾಸಕರಿಗೆ ತಗಲುವ ವೆಚ್ಚವನ್ನು 2011-2012ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಒದಗಿಸಿರುವ ಒಟ್ಟಾರೆ ಆಯವ್ಯಯದಲ್ಲಿ, ನಿಗಧಿತ ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ಆಯವ್ಯಯ ಕೋರಬಾರದು. ನಿಗದಿತ ಲೆಕ್ಕ ಶೀರ್ಷಿಕೆ (2202-02-110-3-01-101(ಯೋಜನೆ) ಅಡಿಯಲ್ಲಿ ಖರ್ಚು ಹಾಕತಕ್ಕದ್ದು. ಮತ್ತು ಆ ಸಂಬಂಧದ ಲೆಕ್ಕಾಚಾರದ ಸಂಪೂರ್ಣ ವಿವರಗಳನ್ನು 2011-2012ನೇ ಸಾಲಿನ ನಿಗಧಿತ ಚೆಕ್‌ಲಿಸ್ಟ್‌ನಲ್ಲಿ ಭರ್ತಿ ಮಾಡಿ ದೃಢೀಕರಿಸಿಕೊಳ್ಳತಕ್ಕದ್ದು.

22. ದಿನಾಂಕ :01-04-2007 ರಿಂದೀಚೆಗೆ ಸದರಿ ಕಾಲೇಜಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ, ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

23. ಈ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಹಾಯಾನುದಾನ ಬಿಡುಗಡೆ ಮಾಡುವ ಮುನ್ನ, ಅವರು ಹೊಂದಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಬಗ್ಗೆ ಹಾಗೂ ಜಾತಿ ದೃಢೀಕರಣ ಪ್ರಮಾಣ ಪತ್ರಗಳ ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ, ಖಚಿತಪಡಿಸಿಕೊಂಡ ನಂತರ ಸಹಾಯಾನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು. ಮುಂದುವರೆದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ಸಿಂಧುತ್ವ ಪ್ರಮಾಣ ಪತ್ರದ ಮೂಲ ದಾಖಲಾತಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

24. ಕರ್ನಾಟಕ ಶಿಕ್ಷಣ ಅಧಿನಿಯಮ 1983 ಹಾಗೂ ಇದರಡಿಯಲ್ಲಿ ರಚಿಸಲಾದ ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು.

25. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ, ಬೇರೆ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಲ್ಲಿ ಅಂತಹ ವಿಶ್ವವಿದ್ಯಾಲಯಗಳಿಂದ ಪಡೆದ ಅಂಕಪಟ್ಟಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

26. ದಿನಾಂಕ :11-09-2006 ರ ಸರ್ಕಾರದ ಪತ್ರ ಸಂಖ್ಯೆ :ಇಡಿ 94 ಎಸ್‌ಇಪಿ 2006 ರನ್ವಯ ರಚಿಸಲಾಗಿರುವ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ ನಿಯಮಗಳು 2005 ನ್ನು ಹಿಂದಿನ ಸೇವಾವಧಿಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.

27. ಮೇಲ್ಕಂಡ ನೌಕರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 1999, ದಿನಾಂಕ :09-10-2006 ರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

28. ಆಡಳಿತ ಮಂಡಳಿಯು ಅನುದಾನ ಸಂಹಿತೆಯ ನಿಯಮಗಳನ್ನು ಹಾಗೂ ಸಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು, ಸೂಚನೆಗಳನ್ನು, ಸುತ್ತೋಲೆಗಳನ್ನು ಮಾರ್ಗಸೂಚಿಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

29. ಈ ಪದವಿ ಪೂರ್ವ ಕಾಲೇಜಿನಲ್ಲಿ ಮುಂದೆ ಖಾಲಿಯಾಗುವ ಅನುದಾನಿತ ಹುದ್ದೆಗಳನ್ನು ತುಂಬಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

30. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಉಪನ್ಯಾಸಕರಿಗೆ ನಿಗದಿತ ಕಾರ್ಯಭಾರವಿದೆಯೇ ಎಂಬ ಬಗ್ಗೆ ಆಯುಕ್ತರು/ಜಿಲ್ಲಾ ಉಪ ನಿರ್ದೇಶಕರು ಪರಿಶೀಲಿಸಿದ ನಂತರ ವೇತನ ಬಿಡುಗಡೆ ಮಾಡತಕ್ಕದ್ದು.

31. ದಿನಾಂಕ :09-10-2006 ರ ಅಧಿಸೂಚನೆಯ ನಿಯಮ 21(4) ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ :17-11-2008 ರನ್ವಯ ಪರಿಶೀಲಿಸಿ, ಸಹಾಯಾನುದಾನದ ಬಗ್ಗೆ ಕ್ರಮ ವಹಿಸತಕ್ಕದ್ದು.

32. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲಾತಿಗಳು ಅಥವಾ ಮಾಹಿತಿಗಳು ಮುಂದೆ ತಪ್ಪೆಂದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

33. ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ, ಸೇವಾ ಸೌಲಭ್ಯಗಳು ಇತ್ಯಾದಿಗಳ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಸಹಾಯಾನುದಾನ ಇಲ್ಲದ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ನ್ನು ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಇದಲ್ಲದೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಕಲಂ 92 ರನ್ವಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು, ಅದರನ್ವಯ ವಿಚಾರಣೆ ನಡೆಸದೆ ಸೇವೆಯಿಂದ ವಜಾ ಮಾಡಲು ಅಥವಾ ತೆಗೆದು ಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಆಡಳಿತ ಮಂಡಳಿ ಅದರ ನೌಕರರ ವಿರುದ್ಧ ಕ್ರಮತೆಗೆದುಕೊಂಡಿದ್ದಲ್ಲಿ ಅಥವಾ ತನ್ನ ನೌಕರರಿಗೆ ಮೇಲೆ ಹೇಳಲಾದ ನಿಯಮಗಳನ್ವಯ ದೊರಕಿಸಬೇಕಾದ

ಸೇವಾ ಸೌಲಭ್ಯಗಳನ್ನು ದೊರಕಿಸದೆ ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ್ದಲ್ಲಿ, ಆ ಉಲ್ಲಂಘನೆಯ ಕಾರಣಕ್ಕಾಗಿ ಸಂಸ್ಥೆಗೆ ಸಹಾಯಾನುದಾನ ನೀಡತಕ್ಕದ್ದಲ್ಲ.

34. ಈ ಆದೇಶವನ್ನು ದಿನಾಂಕ :23-07-2005 ರ ಟಿಪ್ಪಣಿ ಸಂಖ್ಯೆ :ಎಫ್‌ಡಿ 248 ವೆಚ್ಚ-8/2005 ಹಾಗೂ ಆರ್ಥಿಕ ಇಲಾಖೆಯು ದಿನಾಂಕ :25-05-2007 ರ ಟಿಪ್ಪಣಿ ಸಂಖ್ಯೆ :ಆಇ 493/ವೆಚ್ಚ-8/2007 ರಲ್ಲಿ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯು ದಿನಾಂಕ :31-05-2007 ರ ಟಿಪ್ಪಣಿ ಸಂಖ್ಯೆ :ಯೋಇ/65/ಜಶ/2007 ರಲ್ಲಿ ನೀಡಿರುವ ಸಹಮತಿಯೊಂದಿಗೆ ದಿನಾಂಕ : 08-02-2007 ರ ಟಿಪ್ಪಣಿ ಸಂಖ್ಯೆ :ಆಇ 03 ವೆಚ್ಚ-8/2006 ರನ್ವಯ ಮತ್ತು ದಿನಾಂಕ :25-08-2008 ರ ಟಿಪ್ಪಣಿ ಸಂಖ್ಯೆ :ಆಇ-839/ವೆಚ್ಚ/08/08, ತದನಂತರ ದಿನಾಂಕ :02-09-2008 ರ ಟಿಪ್ಪಣಿ ಸಂಖ್ಯೆ :ಆಇ.871/ವೆಚ್ಚ-8/08 ರನ್ವಯ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯು ದಿನಾಂಕ : 26-08-2008 ರ ಟಿಪ್ಪಣಿ ಸಂಖ್ಯೆ :ಪಿಡಿ 87/ಎಂ.ಅಂಡ್.ಇ/2008 ರನ್ವಯ ನೀಡಿರುವ ಸಹಮತಿಯೊಂದಿಗೆ ಹಾಗೂ ಆಇ 594 ವೆಚ್ಚ.8 2011 ದಿನಾಂಕ :24-09-2011 ರನ್ವಯ ಮತ್ತು ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ :ಶಿಇ 260 ಐಎಫ್‌ಎಸ್ 2010 ದಿನಾಂಕ :22-03-2010 ಮತ್ತು ಶಿಇ 1109 ಐಎಫ್‌ಎಸ್ 2011 ದಿನಾಂಕ :19-11-2011 ರಲ್ಲಿ ಶಿಕ್ಷಣ ಇಲಾಖೆಯ ನೀಡಿರುವ ಸಹಮತಿಯಂತೆ ಸದರಿ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

8/12/11

(ಎಸ್.ಹೆಚ್.ಕುರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪದವಿ ಪೂರ್ವ)

ಇವರಿಗೆ:-

1. ಮಹಾಲೇಖಪಾಲರು, (ಎ ಅಂಡ್ ಇ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-560 012. (ಪ್ರಸ್ತಾವನೆಯಲ್ಲಿ ಸರ್ಕಾರಕ್ಕೆ ಕಳುಹಿಸಲಾದ ಎಲ್ಲಾ ಮೂಲ ಅರಕ್ಷಿತ ಹಾಗೂ ಇತರೆ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ)
3. ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.
4. ಜಿಲ್ಲಾ ನೋಂದಣಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.
5. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ.
6. ಉಪ ವಿಭಾಗಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.
7. ಸರ್ಕಾರದ ಜಂಟಿ ಕಾರ್ಯದರ್ಶಿ(ಆಡಳಿತ), ಶಿಕ್ಷಣ ಇಲಾಖೆ.
8. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.
9. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಆಪ್ತ ಕಾರ್ಯದರ್ಶಿಗಳು, ಕಾರ್ಯದರ್ಶಿಯವರ ಆಪ್ತ ಶಾಖೆ, ಶಿಕ್ಷಣ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು, (ವೆಚ್ಚ-8) ಆರ್ಥಿಕ ಇಲಾಖೆ/ಯೋಜನಾ ಇಲಾಖೆ/(ಪಿಪಿ-1)
12. ಅಧ್ಯಕ್ಷರು/ಕಾರ್ಯದರ್ಶಿಗಳು, ಹೆಬ್ಬಾಳ್ ಶ್ರೀ ಮಾರುತಿ ವಿದ್ಯಾಸಂಸ್ಥೆ, ಬೆಂಗಳೂರು-24.
13. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ.

ಓದಲಾಗಿದೆ:- 1)ಸರ್ಕಾರದ ಆದೇಶ ಸಂಖ್ಯೆ:ಇಡಿ 63 ಟಿಪಿಯು 2003, ದಿ:07-05-2007.
2)ಸರ್ಕಾರದ ಆದೇಶ ಸಂಖ್ಯೆ:ಇಡಿ 59 ಪಿಎಂಸಿ 2006, ದಿ:06-10-2007.
3)ಸರ್ಕಾರದ ಆದೇಶ ಸಂಖ್ಯೆ:ಇಡಿ 217 ಪಿಎಂಸಿ 2008, ದಿನಾಂಕ:08-09-2008.
4)ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿ :17-11-2008.
5)ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ :ಪಪೂಶಿಇ/ಪ ಜಾತಿ-ಪ ಪಂ ಖಾಪಪೂಕಾ ಅನು/ಎಂಎಂ 041/2009-10 ದಿನಾಂಕ :03-03-2010.

* * * *

UR 14/12/11 JD-A) DA-6618

**ಪ್ರಸ್ತಾವನೆ:-**

ರಾಜ್ಯದಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಮತ್ತು ಸಾಮಾನ್ಯ ವರ್ಗಕ್ಕೆ ಸೇರಿದ ಆಡಳಿತ ಮಂಡಳಿಗಳ ವತಿಯಿಂದ ದಿನಾಂಕ :01-06-1987 ರಿಂದ 94-95ನೇ ಸಾಲಿನವರೆಗೆ ಪ್ರಾರಂಭಿಸಿ, ಸತತವಾಗಿ ನಡೆಸಲಾಗುತ್ತಿರುವ ಅನುದಾನರಹಿತ ಪದವಿ ಪೂರ್ವ ಕಾಲೇಜುಗಳನ್ನು ಸಹಾಯಾನುದಾನಕ್ಕೆ ಒಳಪಡಿಸಲು ಮೇಲೆ (1) (2) ಮತ್ತು (3) ರಲ್ಲಿ ಓದಲಾದ ಸರ್ಕಾರದ ಆದೇಶಗಳಲ್ಲಿ ಅವಕಾಶ ಕಲ್ಪಿಸಿದ್ದು, ಅದರಲ್ಲಿ ವಿಧಿಸಿರುವ ಷರತ್ತುಗಳನ್ನು ಪೂರೈಸುವ ಶಿಕ್ಷಣ ಸಂಸ್ಥೆಗಳನ್ನು ಸಹಾಯಾನುದಾನಕ್ಕೆ ಒಳಪಡಿಸಬಹುದಾಗಿದೆ. ಸರ್ಕಾರದ ಆದೇಶ ಸಂಖ್ಯೆ :ಇಡಿ 40 ಎಸ್‌ಹೆಚ್‌ಹೆಚ್ 1990 ದಿನಾಂಕ :04-01-1991 ರ ಆದೇಶದಲ್ಲಿ ಹೆಬ್ಬಾಳ್ ಶ್ರೀ ಮಾರುತಿ ವಿದ್ಯಾಸಂಸ್ಥೆ, ಬೆಂಗಳೂರು-24 ಇವರಿಗೆ ಮಂಜೂರಾಗಿದ್ದ ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ ಇದನ್ನು 1990-91ನೇ ಸಾಲಿನಿಂದ ಪ್ರಾರಂಭಿಸಿ, ಯಾವುದೇ ವಿಚ್ಛಿನ್ನತೆ ಇಲ್ಲದೇ ನಡೆಸುತ್ತಾ ಬಂದಿದೆ.

ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ದಿನಾಂಕ :07-05-2007, 06.10.2007 ಮತ್ತು 08-09-2008 ರ ಆದೇಶಗಳಲ್ಲಿನ ಷರತ್ತುಗಳ ಪ್ರಕಾರ ಜಿಲ್ಲಾ ಪರಿಶೀಲನಾ ಸಮಿತಿಯಿಂದ ಈ ಪದವಿ ಪೂರ್ವ ಕಾಲೇಜನ್ನು ಸಹಾಯಾನುದಾನಕ್ಕೆ ಒಳಪಡಿಸುವ ಸಂಬಂಧ, ತಪಾಸಣೆಯನ್ನು ಮಾಡಿಸಿ, ವರದಿಯನ್ನು ಪಡೆದುಕೊಂಡು, ಸದರಿ ಸಮಿತಿಯ ಶಿಫಾರಸ್ಸನ್ನು ಪರಿಶೀಲಿಸಿ ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಮಾಲೂರು, ಕೋಲಾರ ಜಿಲ್ಲೆ

ಇದನ್ನು ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮೇಲೆ (5) ರಲ್ಲಿ ಓದಲಾದ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಜಿಲ್ಲಾ ಪರಿಶೀಲನಾ ಸಮಿತಿಯ ವರದಿಯನ್ನೊಳಗೊಂಡಂತೆ ಹಾಗೂ ನಿರ್ದೇಶಕರ ಪ್ರಸ್ತಾವನೆಯನ್ನು ಸರ್ಕಾರದ ಆದೇಶ ದಿನಾಂಕ :07-05-2007, 06-10-2007 ಮತ್ತು 08-09-2008 ರಲ್ಲಿನ ಷರತ್ತು ಮತ್ತು ನಿಬಂಧನೆಗಳು ಹಾಗೂ ಮಾರ್ಗಸೂಚಿಗಳನ್ವಯ ಮತ್ತು ವಿದ್ಯಾರ್ಥಿಗಳ ದಾಖಲಾತಿ/ಹಾಜರಾತಿ ಬಗ್ಗೆ ಮೇಲೆ (4) ರಲ್ಲಿ ಹೊರಡಿಸಲಾಗಿರುವ ಸುತ್ತೋಲೆಯನ್ವಯ ಸರ್ಕಾರವು ಪರಿಶೀಲಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 49 ಟಿಪಿಯು 2010,**
**ಬೆಂಗಳೂರು, ದಿನಾಂಕ: 08ನೇ ಡಿಸೆಂಬರ್ 2011.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನಲೆಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯಾದ ಹೆಬ್ಬಾಳ್ ಶ್ರೀ ಮಾರುತಿ ವಿದ್ಯಾಸಂಸ್ಥೆ, ಬೆಂಗಳೂರು-24 ಇದರ ವತಿಯಿಂದ ನಡೆಯುತ್ತಿರುವ ಶ್ರೀ ಮಾರುತಿ ಸ್ವತಂತ್ರ ಪದವಿ ಪೂರ್ವ ಕಾಲೇಜು. ಮಾಲೂರು. ಕೋಲಾರ ಜಿಲ್ಲೆ ಈ ಪದವಿ ಪೂರ್ವ ಕಾಲೇಜನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟು, ಈ ಆದೇಶ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ, ಈ ಕೆಳಕಾಣಿಸಿದ 06 (ಆರು) ಉಪನ್ಯಾಸಕರುಗಳ ಹುದ್ದೆಗಳೊಂದಿಗೆ ಭವಿಷ್ಯಾನ್ವಯವಾಗಿ ಸಹಾಯಾನುದಾನಕ್ಕೆ ಒಳಪಡಿಸಿ ಆದೇಶಿಸಿದೆ. ಸಹಾಯಾನುದಾನಕ್ಕೆ ಒಳಪಡಿಸಲಾದ ಸಿಬ್ಬಂದಿಯ ವಿವರಗಳು ಕೆಳಕಂಡಂತಿದೆ :-

| ಬೋಧಕ ಸಿಬ್ಬಂದಿ | | | |
|---|---|---|---|
| ಕ್ರ ಸಂ. | ಹೆಸರು ಶ್ರೀ/ಶ್ರೀಮತಿ | ಪದನಾಮ | ಪ್ರವರ್ಗ |
| 1. | ರಾಮಚಂದ್ರಪ್ಪ ಹೆಚ್. | ಸಮಾಜಶಾಸ್ತ್ರ ಉಪನ್ಯಾಸಕರು | ಸಾಮಾನ್ಯ |
| 2. | ಮುನಿಯಪ್ಪ ಎಂ. | ಕನ್ನಡ ಭಾಷಾ ಉಪನ್ಯಾಸಕರು | ಪರಿಶಿಷ್ಟ ಜಾತಿ |
| 3. | ಮಹಾಂತೇಶ್ವರ ಟಿ. | ಆಂಗ್ಲ ಭಾಷಾ ಉಪನ್ಯಾಸಕರು | ಪ್ರವರ್ಗ-3ಬಿ |
| 4. | ಸುಭಾಕರ್ ರಾವ್ ಸಿಂಧೆ ಬಿ. | ಇತಿಹಾಸ ಉಪನ್ಯಾಸಕರು | ಪ್ರವರ್ಗ-3ಬಿ |
| 5. | ನಾಗರಾಜ | ಅರ್ಥಶಾಸ್ತ್ರ ಉಪನ್ಯಾಸಕರು | ಪರಿಶಿಷ್ಟ ಪಂಗಡ |
| 6. | ಎಂ.ಡಿ.ಸತ್ಯನಾರಾಯಣ್ | ರಾಜ್ಯಶಾಸ್ತ್ರ ಉಪನ್ಯಾಸಕರು | ಪ್ರವರ್ಗ-1 |

**ಷರತ್ತುಗಳು**

1. ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು, 2006 ರ ನಿಯಮ 21(2) ಮತ್ತು 21(3) ರನ್ವಯ ಸದರಿ ಸಿಬ್ಬಂದಿಗಳು ಅನುದಾನರಹಿತ ಅವಧಿಯಲ್ಲಿ ಸಲ್ಲಿಸಿದ ಸೇವೆಯನ್ನು ಯಾವುದೇ ಸೇವಾ ಸೌಲಭ್ಯಗಳಿಗೆ ಪರಿಗಣಿಸಲಾಗುವುದಿಲ್ಲವೆಂಬ ಷರತ್ತಿಗೆ ಬದ್ಧನಾಗಿರುತ್ತೇನೆ ಎಂದು ಪ್ರತಿಯೊಬ್ಬ ಸಿಬ್ಬಂದಿಗಳಿಂದ ಮುಚ್ಚಳಿಕೆ ಪತ್ರವನ್ನು

ಬರೆಸಿಕೊಂಡ ನಂತರವೇ ಸಹಾಯಾನುದಾನಕ್ಕೆ ಒಳಪಡಿಸುವ ಬಗ್ಗೆ ಮುಂದಿನ ಕ್ರಮವಹಿಸತಕ್ಕದ್ದು.

2. ಸರ್ಕಾರದ ಆದೇಶ ಸಂಖ್ಯೆ :ಇಡಿ 63 ಟಿಪಿಯು 2003, ದಿನಾಂಕ :07-05-2007 ಮತ್ತು ಸರ್ಕಾರದ ಆದೇಶ ಸಂಖ್ಯೆ :ಇಡಿ 217 ಪಿಎಂಸಿ 2008, ದಿನಾಂಕ : 08-09-2008 ರಲ್ಲಿನ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು. ತಪ್ಪಿದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

3. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಶಿಕ್ಷಣ ಸಂಸ್ಥೆಯ ವತಿಯಿಂದ ನಡೆಯುತ್ತಿರುವ ಈ ಪದವಿ ಪೂರ್ವ ಕಾಲೇಜನ್ನು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ದಿನಾಂಕ:01-06-1987 ರಿಂದ 90-91ನೇ ಶೈಕ್ಷಣಿಕ ಸಾಲಿನ ಅವಧಿಯಲ್ಲಿ ಅಧಿಕೃತವಾಗಿ ಪ್ರಾರಂಭವಾಗಿರುವುದನ್ನು ನಿರ್ದೇಶಕರು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ಆ ರೀತಿ ಆಗಿರದಿದ್ದಲ್ಲಿ ಸಹಾಯಾನುದಾನವನ್ನು ಬಿಡುಗಡೆ ಮಾಡತಕ್ಕದ್ದಲ್ಲ.

4. ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಿದ ನಂತರ ಯಾವುದೇ ವಿಚ್ಛಿನ್ನತೆ ಇಲ್ಲದೇ ಇದುವರೆವಿಗೂ ಸತತವಾಗಿ ನಡೆದಿರಬೇಕು.

5. ಆಡಳಿತ ಮಂಡಳಿಯಲ್ಲಿನ ಎಲ್ಲಾ ಸದಸ್ಯರು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು.

6. ಈ ಪದವಿ ಪೂರ್ವ ಕಾಲೇಜಿನಲ್ಲಿ ಶೇ 50 ಕ್ಕಿಂತ ಕಡಿಮೆ ಇಲ್ಲದಂತೆ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳಿರಬೇಕು. ಈ ಷರತ್ತನ್ನು ಸಹಾಯಾನುದಾನಕ್ಕೆ ಒಳಪಡಿಸಿದ 03 ವರ್ಷಗಳ ಒಳಗೆ ಪೂರೈಸತಕ್ಕದ್ದು. ಇಲ್ಲದಿದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

7. ಈ ಪದವಿ ಪೂರ್ವ ಕಾಲೇಜು ಪ್ರಾರಂಭವಾದ ದಿನಾಂಕದಿಂದ ಇದುವರೆವಿಗೂ ಮಾನ್ಯತೆಯನ್ನು ಪಡೆದಿರತಕ್ಕದ್ದು. ಹಾಗಿಲ್ಲದಿದ್ದಲ್ಲಿ ಕೆಲವು ವರ್ಷಗಳಿಗೆ ಮಾನ್ಯತೆಯನ್ನು ಪಡೆಯದಿದ್ದರೂ ಸಹ ಪದವಿ ಪೂರ್ವ ಕಾಲೇಜು ವಿಚ್ಛಿನ್ನತೆ ಇಲ್ಲದೇ ಸತತವಾಗಿ ನಡೆದಿರತಕ್ಕದ್ದು.

8. ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09-10-2006 ರಲ್ಲಿ ನಿಗಧಿಪಡಿಸಿರುವ ಕನಿಷ್ಠ ಮೂಲಭೂತ ಸೌಲಭ್ಯಗಳಾದ ಕಟ್ಟಡ, ಪೀಠೋಪಕರಣ, ಪಾಠೋಪಕರಣ, ಗ್ರಂಥಾಲಯ, ಪ್ರಯೋಗ ಶಾಲೆ, ಕುಡಿಯುವ ನೀರು, ಶೌಚಾಲಯ, ವಿದ್ಯುತ್ ಸೌಲಭ್ಯ, ಆಟದ ಮೈದಾನ ಮುಂತಾದ ಸೌಲಭ್ಯಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಹಾಗೂ ಕಾಲೇಜಿನ ಸುತ್ತಮುತ್ತಲಿನ ಪ್ರದೇಶವು ಆರೋಗ್ಯಕರವಾದ ಮತ್ತು ನಿರ್ಮಲವಾದ ವಾತಾವರಣ ಹೊಂದಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆ ಉತ್ತಮಗೊಳಿಸುವ ನಿಟ್ಟಿನಲ್ಲಿರುವಂತೆ, ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ಕಾಲಾವಕಾಶದಲ್ಲಿ ಒದಗಿಸತಕ್ಕದ್ದು. ಇಲ್ಲದಿದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

9. ಪದವಿ ಪೂರ್ವ ಕಾಲೇಜಿಗೆ ದಿನಾಂಕ :01-06-1987 ರಿಂದ 94-95ನೇ ಸಾಲಿನವರೆವಿಗೆ ಮಂಜೂರಾಗಿರುವಂತಹ ವಿಭಾಗಗಳು/ಸಂಯೋಜನೆಗಳನ್ನು ಮಾತ್ರ ಸಹಾಯಾನುದಾನಕ್ಕೆ ಒಳಪಡಿಸತಕ್ಕದ್ದು.

10. ಪ್ರತಿಯೊಂದು ಸಂಯೋಜನೆಯಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ :17-11-2008 ರಲ್ಲಿ ನಿಗಧಿಪಡಿಸಿರುವಂತೆ ಕನಿಷ್ಠ ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರತಕ್ಕದ್ದು. ಹಾಗೂ ವಿದ್ಯಾರ್ಥಿ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.

11. ಸರ್ಕಾರದ ಆದೇಶ ಸಂಖ್ಯೆ :ಇಡಿ 136 ಟಿಪಿಯು 2009, ದಿನಾಂಕ :09-10-2006 ರಲ್ಲಿ ನಿಗಧಿಪಡಿಸಿರುವ ಹಾಗೂ ಸರ್ಕಾರದ ಆದೇಶ ಸಂಖ್ಯೆ :ಇಡಿ 63 ಟಿಪಿಯು 2003, ದಿನಾಂಕ :07.05.2007 ರ ಅನುಬಂಧ-2 ರಲ್ಲಿ ಕ್ರಮ ಸಂಖ್ಯೆ :13 ರಲ್ಲಿರುವ ಮಾದರಿ ಸಿಬ್ಬಂದಿಯಂತೆ ನೇಮಕಾತಿಯನ್ನು ಮಾಡಿಕೊಳ್ಳತಕ್ಕದ್ದು.

12. ಸಿಬ್ಬಂದಿ ನೇಮಕಾತಿಯು ಸರ್ಕಾರದ ಮೀಸಲಾತಿ ಆದೇಶಗಳನ್ವಯ ನಿಗಧಿಪಡಿಸಿದ 100 ಬಿಂದುಗಳ ಮೀಸಲಾತಿ ರೋಸ್ಟರ್ ಪ್ರಕಾರ ಇರತಕ್ಕದ್ದು. ಪರಿಶಿಷ್ಟ ಜಾತಿಗೆ ಕನಿಷ್ಠ ಶೇ.15 ರಷ್ಟು ಮತ್ತು ಪರಿಶಿಷ್ಟ ಪಂಗಡಕ್ಕೆ ಕನಿಷ್ಠ ಶೇ. 3 ರಷ್ಟು ಪ್ರಾತಿನಿಧ್ಯತೆ ಇರತಕ್ಕದ್ದು. ದಿನಾಂಕ :01-06-1992 ಕ್ಕೆ ಪೂರ್ವದಲ್ಲಿ ಮಾಡಿಕೊಳ್ಳಲಾದ ನೇಮಕಾತಿಗಳಲ್ಲಿ ಮೀಸಲಾತಿ ಉಲ್ಲಂಘನೆಯನ್ನು ದಿನಾಂಕ :21-04-1995 ರ ಸರ್ಕಾರದ ಆದೇಶ ಸಂಖ್ಯೆ :ಇಡಿ 227 ಎಸ್ಇಪಿ 94 ರನ್ವಯ ಮನ್ನಾ ಮಾಡಲಾಗಿದೆ. ಇದರಿಂದಾಗಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳಿಗೆ ಸೇರಿದವರಿಗೆ ಆದ ನಷ್ಟವನ್ನು ಬ್ಯಾಕ್‌ಲಾಗ್ ಎಂದು ಪರಿಗಣಿಸಿ, ಮುಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳನ್ನು ನೇಮಿಸಿಕೊಂಡು ಕಡ್ಡಾಯವಾಗಿ ಮೀಸಲಾತಿಯನ್ನು ಸರಿದೂಗಿಸಿಕೊಳ್ಳತಕ್ಕದ್ದು.

13. ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯ ಇದ್ದಲ್ಲಿ ಅಂತಹ ಪದವಿ ಪೂರ್ವ ಕಾಲೇಜಿನ ನೌಕರರು ಸಹಾಯಾನುದಾನಕ್ಕೆ ಅರ್ಹತೆ ಪಡೆಯುವುದಿಲ್ಲ.

14. ಸಹಾಯಾನುದಾನಕ್ಕೆ ಒಳಪಡಿಸಿರುವ ಈ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿನ ಸಾಮಾನ್ಯ ಫಲಿತಾಂಶವು ಕಳೆದ 05 ವರ್ಷಗಳಲ್ಲಿನ ಸಂಬಂಧಿಸಿದ ಜಿಲ್ಲೆಯ ಸರಾಸರಿ ಫಲಿತಾಂಶಕ್ಕೆ ಸಮನಾಗಿ ಅಥವಾ ಹೆಚ್ಚಿಗೆ ಇರತಕ್ಕದ್ದು. ಪ್ರಸ್ತುತ ಈ ರೀತಿ ಇಲ್ಲದಿದ್ದಲ್ಲಿ, ಸಹಾಯಾನುದಾನಕ್ಕೆ ಒಳಪಡಿಸಿದ ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ಅಂತ್ಯದಲ್ಲೂ ದ್ವಿತೀಯ ಪದವಿ ಪೂರ್ವ ಪರೀಕ್ಷೆಯಲ್ಲಿ ಮೇಲಿನಂತೆ ನಿಗಧಿಪಡಿಸಿದ ಕನಿಷ್ಠ ಫಲಿತಾಂಶ ಗಳಿಸದೇ ಇದ್ದಲ್ಲಿ, ಸಹಾಯಾನುದಾನವನ್ನು ನಿಲ್ಲಿಸಲಾಗುವುದು.

15. ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 ಮತ್ತು ನಿಯಮಗಳು 1961ರನ್ವಯ ಪ್ರತಿ ವರ್ಷ ಆಡಿಟ್ ನಡೆಸಿ, ವರದಿಯನ್ನು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಹಾಗೂ ಶಿಕ್ಷಣ ಇಲಾಖೆಯ ಮಾಹಿತಿಗಾಗಿ ಪಿ.ಟಿ.ಆರ್. ಮತ್ತು ಸಂಘದ ಕಾರ್ಯಕಾರಿ ಸದಸ್ಯರ ಅಧಿಕೃತ ಪಟ್ಟಿಯನ್ನು (ಸಕ್ಷಮ ಪ್ರಾಧಿಕಾರದಿಂದ ದೃಢೀಕರಿಸಲ್ಪಟ್ಟಿರಬೇಕು) ಸಲ್ಲಿಸತಕ್ಕದ್ದು.

16. ಪ್ರತಿ ವರ್ಷ ಶೈಕ್ಷಣಿಕ ಮಾನ್ಯತೆಯನ್ನು ಸಂಬಂಧಿಸಿದ ನಿಯಮ/ಆದೇಶಗಳನ್ವಯ ನಿಗಧಿಪಡಿಸಿದಂತೆ ಪಡೆಯತಕ್ಕದ್ದು. ಪದವಿ ಪೂರ್ವ ಕಾಲೇಜಿನಲ್ಲಿ ನಿಗಧಿತ ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಕಾಯ್ದುಕೊಳ್ಳತಕ್ಕದ್ದು.

17. ಈ ಆದೇಶ ಹೊರಡಿಸಿದ ದಿನಾಂಕದಿಂದ 03 ವರ್ಷಗಳ ನಂತರ, ಎಲ್ಲಾ ಷರತ್ತುಗಳನ್ನು ಪೂರೈಸಲಾಗಿದೆಯೇ ಎಂಬುದರ ಬಗ್ಗೆ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ತಪಾಸಣೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

18. ಮೇಲ್ಕಂಡ ಬೋಧಕ/ಬೋಧಕೇತರ ಸಿಬ್ಬಂದಿಯ ವೇತನವನ್ನು ಭವಿಷ್ಯಾನ್ವಯವಾಗಿ ಈ ಆದೇಶ ಹೊರಡಿಸಿದ ದಿನಾಂಕದಿಂದ ನಿಯಮಗಳನುಸಾರ ಸಂಬಂಧಿಸಿದ ಹುದ್ದೆಯ ವೇತನ ಶ್ರೇಣಿಯ ಕನಿಷ್ಟ ಹಂತಕ್ಕೆ ನಿಗಧಿಪಡಿಸಿ ನೀಡತಕ್ಕದ್ದು.

19. ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 90 ಪಿಎಂಸಿ 99, ದಿನಾಂಕ :15-10-99 ರನ್ವಯ ಹಾಗೂ ಸರ್ಕಾರದ ಆದೇಶ ಸಂಖ್ಯೆ: ಇಡಿ 674 ಎಸ್‌ಇಡಬ್ಲ್ಯೂ 2005, ದಿನಾಂಕ :10-04-2006 ರನ್ವಯ ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 99, ದಿನಾಂಕ :09-10-2006 ರ ನಿಯಮ 21(2)(3) ರನ್ವಯ ಹಿಂದಿನ ಯಾವುದೇ ಬಾಕಿಗೆ ಈ ಸಿಬ್ಬಂದಿಗಳು ಅರ್ಹರಿರುವುದಿಲ್ಲ. ಇವರ ಹಿಂದಿನ ಅನುದಾನರಹಿತ ಸೇವೆಯನ್ನು ವೇತನ ನಿಗಧಿ, ವೇತನ ಬಡ್ತಿ, ಪಿಂಚಣಿ, ರಜೆ, ಸೇವಾ ಜೇಷ್ಠತೆ ಮತ್ತು ಯಾವುದೇ ಇತರೆ ಸೇವಾ ಸೌಲಭ್ಯಗಳಿಗೆ ಪರಿಗಣಿಸತಕ್ಕದ್ದಲ್ಲ.

20. ಮೇಲ್ಕಂಡ ಸಿಬ್ಬಂದಿಗಳ ವೇತನವನ್ನು ಈ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯಾನ್ವಯವಾಗಿ ಮಾತ್ರ ಬಿಡುಗಡೆ ಮಾಡತಕ್ಕದ್ದು.

21. ಈ ಆದೇಶದಲ್ಲಿ ನಮೂದಿಸಿರುವ ಒಟ್ಟು 06(ಆರು) ಉಪನ್ಯಾಸಕರಿಗೆ ತಗಲುವ ವೆಚ್ಚವನ್ನು 2011-2012ನೇ ಸಾಲಿನಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಒದಗಿಸಿರುವ ಒಟ್ಟಾರೆ ಆಯವ್ಯಯದಲ್ಲಿ, ನಿಗಧಿತ ಅನುದಾನದ ಮಿತಿಯಲ್ಲಿ ಭರಿಸತಕ್ಕದ್ದು. ಯಾವುದೇ ಕಾರಣಕ್ಕೂ ಹೆಚ್ಚುವರಿ ಆಯವ್ಯಯ ಕೋರಬಾರದು. ನಿಗದಿತ ಲೆಕ್ಕ ಶೀರ್ಷಿಕೆ (2202-02-110-3-01-101(ಯೋಜನೆ) ಅಡಿಯಲ್ಲಿ ಖರ್ಚು ಹಾಕತಕ್ಕದ್ದು. ಮತ್ತು ಆ ಸಂಬಂಧದ ಲೆಕ್ಕಾಚಾರದ ಸಂಪೂರ್ಣ ವಿವರಗಳನ್ನು 2011-2012ನೇ ಸಾಲಿನ ನಿಗಧಿತ ಚೆಕ್‌ಲಿಸ್ಟ್‌ನಲ್ಲಿ ಭರ್ತಿ ಮಾಡಿ ದೃಢೀಕರಿಸಿಕೊಳ್ಳತಕ್ಕದ್ದು.

22. ದಿನಾಂಕ :01-04-2007 ರಿಂದೀಚೆಗೆ ಸದರಿ ಕಾಲೇಜಿನ ಲೆಕ್ಕಪತ್ರಗಳನ್ನು ಆಡಿಟ್ ಮಾಡಿಸಿ, ಸಂಬಂಧಪಟ್ಟ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.

23. ಈ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ಸಹಾಯಾನುದಾನ ಬಿಡುಗಡೆ ಮಾಡುವ ಮುನ್ನ, ಅವರು ಹೊಂದಿರುವ ವಿದ್ಯಾರ್ಹತೆ ಮತ್ತು ವಯೋಮಿತಿ ಬಗ್ಗೆ ಹಾಗೂ ಜಾತಿ ದೃಢೀಕರಣ ಪ್ರಮಾಣ ಪತ್ರಗಳ ಮೂಲ ಪ್ರಮಾಣ ಪತ್ರಗಳನ್ನು ಖುದ್ದಾಗಿ ಪರಿಶೀಲಿಸಿ, ಖಚಿತಪಡಿಸಿಕೊಂಡ ನಂತರ ಸಹಾಯಾನುದಾನವನ್ನು ಬಿಡುಗಡೆ ಮಾಡಲು ಕ್ರಮವಹಿಸತಕ್ಕದ್ದು. ಮುಂದುವರೆದು, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ, ಸಿಂಧುತ್ವ ಪ್ರಮಾಣ ಪತ್ರದ ಮೂಲ ದಾಖಲಾತಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

24. ಕರ್ನಾಟಕ ಶಿಕ್ಷಣ ಅಧಿನಿಯಮ 1983 ಹಾಗೂ ಇದರಡಿಯಲ್ಲಿ ರಚಿಸಲಾದ ಎಲ್ಲಾ ನಿಯಮಗಳನ್ನು ಪಾಲಿಸತಕ್ಕದ್ದು.

25. ಕರ್ನಾಟಕ ರಾಜ್ಯದ ವಿಶ್ವವಿದ್ಯಾಲಯಗಳನ್ನು ಹೊರತುಪಡಿಸಿ, ಬೇರೆ ರಾಜ್ಯಗಳ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಇನ್ನಿತರ ವಿಶ್ವವಿದ್ಯಾಲಯಗಳಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಲ್ಲಿ ಅಂತಹ ವಿಶ್ವವಿದ್ಯಾಲಯಗಳಿಂದ ಪಡೆದ ಅಂಕಪಟ್ಟಿಗಳನ್ನು ಖುದ್ದಾಗಿ ಪರಿಶೀಲಿಸಿ ಖಚಿತಪಡಿಸಿಕೊಳ್ಳತಕ್ಕದ್ದು.

26. ದಿನಾಂಕ :11-09-2006 ರ ಸರ್ಕಾರದ ಪತ್ರ ಸಂಖ್ಯೆ :ಇಡಿ 94 ಎಸ್‌ಇಪಿ 2006 ರನ್ವಯ ರಚಿಸಲಾಗಿರುವ ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ ನಿಯಮಗಳು 2005 ನ್ನು ಹಿಂದಿನ ಸೇವಾವಧಿಯಲ್ಲಿ ಕಟ್ಟುನಿಟ್ಟಾಗಿ ಪಾಲಿಸಲಾಗಿದೆಯೇ ಎಂಬ ಬಗ್ಗೆ ಪರಿಶೀಲಿಸತಕ್ಕದ್ದು.

27. ಮೇಲ್ಕಂಡ ನೌಕರರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ :ಇಡಿ 136 ಟಿಪಿಯು 1999, ದಿನಾಂಕ :09-10-2006 ರ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

28. ಆಡಳಿತ ಮಂಡಳಿಯು ಅನುದಾನ ಸಂಹಿತೆಯ ನಿಯಮಗಳನ್ನು ಹಾಗೂ ಸಕಾರವು ಆಗಿಂದಾಗ್ಗೆ ಹೊರಡಿಸುವ ಆದೇಶಗಳನ್ನು, ಸೂಚನೆಗಳನ್ನು, ಸುತ್ತೋಲೆಗಳನ್ನು ಮಾರ್ಗಸೂಚಿಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.

29. ಈ ಪದವಿ ಪೂರ್ವ ಕಾಲೇಜಿನಲ್ಲಿ ಮುಂದೆ ಖಾಲಿಯಾಗುವ ಅನುದಾನಿತ ಹುದ್ದೆಗಳನ್ನು ತುಂಬಿಕೊಳ್ಳಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮೋದನೆಯನ್ನು ಪಡೆಯತಕ್ಕದ್ದು.

30. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಉಪನ್ಯಾಸಕರಿಗೆ ನಿಗಧಿತ ಕಾರ್ಯಭಾರವಿದೆಯೇ ಎಂಬ ಬಗ್ಗೆ ಆಯುಕ್ತರು/ಜಿಲ್ಲಾ ಉಪ ನಿರ್ದೇಶಕರು ಪರಿಶೀಲಿಸಿದ ನಂತರ ವೇತನ ಬಿಡುಗಡೆ ಮಾಡತಕ್ಕದ್ದು.

31. ದಿನಾಂಕ :09-10-2006 ರ ಅಧಿಸೂಚನೆಯ ನಿಯಮ 21(4) ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ :ಇಡಿ 128 ಟಿಪಿಯು 2008, ದಿನಾಂಕ :17-11-2008 ರನ್ವಯ ಪರಿಶೀಲಿಸಿ, ಸಹಾಯಾನುದಾನದ ಬಗ್ಗೆ ಕ್ರಮ ವಹಿಸತಕ್ಕದ್ದು.

32. ಪ್ರಸ್ತಾವನೆಯಲ್ಲಿ ಸಲ್ಲಿಸಿರುವ ದಾಖಲಾತಿಗಳು ಅಥವಾ ಮಾಹಿತಿಗಳು ಮುಂದೆ ತಪ್ಪೆಂದು ಕಂಡುಬಂದಲ್ಲಿ ಸಂಬಂಧಪಟ್ಟವರ ಮೇಲೆ ಕಾನೂನು ರೀತ್ಯಾ ಸೂಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

33. ಅನುದಾನರಹಿತ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಭದ್ರತೆ, ಸೇವಾ ಸೌಲಭ್ಯಗಳು ಇತ್ಯಾದಿಗಳ ಕುರಿತು ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಸಹಾಯಾನುದಾನ ಇಲ್ಲದ ಖಾಸಗಿ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ನೌಕರರ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಗಳು, 2005 ನ್ನು ಅನುದಾನರಹಿತ ಶಿಕ್ಷಣ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿದೆ. ಇದಲ್ಲದೆ ಕರ್ನಾಟಕ ಶಿಕ್ಷಣ ಕಾಯ್ದೆ 1983 ರ ಕಲಂ 92 ರನ್ವಯ ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರನ್ನು, ಅದರನ್ವಯ ವಿಚಾರಣೆ ನಡೆಸದೆ ಸೇವೆಯಿಂದ ವಜಾ ಮಾಡಲು ಅಥವಾ ತೆಗೆದು ಹಾಕಲು ಬರುವುದಿಲ್ಲ. ಸದರಿ ನಿಯಮಗಳನ್ನು ಅಥವಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ, ಯಾವುದೇ ಆಡಳಿತ ಮಂಡಳಿ ಅದರ ನೌಕರರ ವಿರುದ್ಧ ಕ್ರಮತೆಗೆದುಕೊಂಡಿದ್ದಲ್ಲಿ ಅಥವಾ ತನ್ನ ನೌಕರರಿಗೆ ಮೇಲೆ ಹೇಳಲಾದ ನಿಯಮಗಳನ್ವಯ ದೊರಕಿಸಬೇಕಾದ

ಸೇವಾ ಸೌಲಭ್ಯಗಳನ್ನು ದೊರಕಿಸದೆ ಸೇವಾ ಷರತ್ತುಗಳ ಉಲ್ಲಂಘನೆ ಮಾಡಿದ್ದಲ್ಲಿ, ಆ ಉಲ್ಲಂಘನೆಯ ಕಾರಣಕ್ಕಾಗಿ ಸಂಸ್ಥೆಗೆ ಸಹಾಯಾನುದಾನ ನೀಡತಕ್ಕದ್ದಲ್ಲ.

34. ಈ ಆದೇಶವನ್ನು ದಿನಾಂಕ :23-07-2005 ರ ಟಿಪ್ಪಣಿ ಸಂಖ್ಯೆ :ಎಫ್‌ಡಿ 248 ವೆಚ್ಚ-8/2005 ಹಾಗೂ ಆರ್ಥಿಕ ಇಲಾಖೆಯು ದಿನಾಂಕ :25-05-2007 ರ ಟಿಪ್ಪಣಿ ಸಂಖ್ಯೆ :ಆಇ 493/ವೆಚ್ಚ-8/2007 ರಲ್ಲಿ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯು ದಿನಾಂಕ :31-05-2007 ರ ಟಿಪ್ಪಣಿ ಸಂಖ್ಯೆ :ಯೋಇ/65/ಜಶ/2007 ರಲ್ಲಿ ನೀಡಿರುವ ಸಹಮತಿಯೊಂದಿಗೆ ದಿನಾಂಕ : 08-02-2007 ರ ಟಿಪ್ಪಣಿ ಸಂಖ್ಯೆ :ಆಇ 03 ವೆಚ್ಚ-8/2006 ರನ್ವಯ ಮತ್ತು ದಿನಾಂಕ :25-08-2008 ರ ಟಿಪ್ಪಣಿ ಸಂಖ್ಯೆ :ಆಇ-839/ವೆಚ್ಚ/08/08, ತದನಂತರ ದಿನಾಂಕ :02-09-2008 ರ ಟಿಪ್ಪಣಿ ಸಂಖ್ಯೆ :ಆಇ.871/ವೆಚ್ಚ-8/08 ರನ್ವಯ ನೀಡಿರುವ ಸಹಮತಿಯಂತೆ ಹಾಗೂ ಯೋಜನಾ ಇಲಾಖೆಯು ದಿನಾಂಕ : 26-08-2008 ರ ಟಿಪ್ಪಣಿ ಸಂಖ್ಯೆ :ಪಿಡಿ 87/ಎಂ.ಅಂಡ್.ಇ/2008 ರನ್ವಯ ನೀಡಿರುವ ಸಹಮತಿಯೊಂದಿಗೆ ಹಾಗೂ ಆಇ 594 ವೆಚ್ಚ.8 2011 ದಿನಾಂಕ :24-09-2011 ರನ್ವಯ ಮತ್ತು ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ :ಶಿಇ 260 ಐಎಫ್ಎಸ್ 2010 ದಿನಾಂಕ :22-03-2010 ಮತ್ತು ಶಿಇ 1109 ಐಎಫ್ಎಸ್ 2011 ದಿನಾಂಕ :19-11-2011 ರಲ್ಲಿ ಶಿಕ್ಷಣ ಇಲಾಖೆಯ ನೀಡಿರುವ ಸಹಮತಿಯಂತೆ ಸದರಿ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

8/12/11

(ಎಸ್.ಹೆಚ್.ಕುರಿಯವರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪದವಿ ಪೂರ್ವ)

ಇವರಿಗೆ:-

1. ಮಹಾಲೇಖಪಾಲರು, (ಎ ಅಂಡ್ ಇ) ಕರ್ನಾಟಕ. ಬೆಂಗಳೂರು.
2. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡ ರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರ, ಬೆಂಗಳೂರು-560 012. (ಪ್ರಸ್ತಾವನೆಯಲ್ಲಿ ಸರ್ಕಾರಕ್ಕೆ ಕಳುಹಿಸಲಾದ ಎಲ್ಲಾ ಮೂಲ ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ)
3. ಜಿಲ್ಲಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.
4. ಜಿಲ್ಲಾ ನೋಂದಣಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.
5. ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಕೋಲಾರ ಜಿಲ್ಲೆ, ಕೋಲಾರ.
6. ಉಪ ವಿಭಾಗಾಧಿಕಾರಿಗಳು, ಕೋಲಾರ ಜಿಲ್ಲೆ, ಕೋಲಾರ.
7. ಸರ್ಕಾರದ ಜಂಟಿ ಕಾರ್ಯದರ್ಶಿ(ಆಡಳಿತ), ಶಿಕ್ಷಣ ಇಲಾಖೆ.
8. ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ.
9. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
10. ಆಪ್ತ ಕಾರ್ಯದರ್ಶಿಗಳು, ಕಾರ್ಯದರ್ಶಿಯವರ ಆಪ್ತ ಶಾಖೆ, ಶಿಕ್ಷಣ ಇಲಾಖೆ.
11. ಸರ್ಕಾರದ ಅಧೀನ ಕಾರ್ಯದರ್ಶಿಗಳು, (ವೆಚ್ಚ-8) ಆರ್ಥಿಕ ಇಲಾಖೆ/ಯೋಜನಾ ಇಲಾಖೆ/(ಪಿಪಿ-1)
12. ಅಧ್ಯಕ್ಷರು/ಕಾರ್ಯದರ್ಶಿಗಳು, ಹೆಬ್ಬಾಳ್ ಶ್ರೀ ಮಾರುತಿ ವಿದ್ಯಾಸಂಸ್ಥೆ, ಬೆಂಗಳೂರು-24.
13. ಶಾಖಾ ರಕ್ಷಾ ಕಡತ // ಹೆಚ್ಚುವರಿ ಪ್ರತಿಗಳು.